ಸಂಘದ ಕಾರ್ಯಕಾರಿ ಸಮಿತಿ:

ಸಂಘದ ಕಾರ್ಯಕಾರಿ ಸಮಿತಿಯು 13 ಸದಸ್ಯರನ್ನು ಒಳಗೊಂಡಿದ್ದು 7 ಜನ ಗಿರಿಜನ ಸದಸ್ಯರು ಚುನಾಯಿತ ಸದಸ್ಯರಾಗಿದ್ದಾರೆ. ಉಳಿದ 6 ಜನ ಸದಸ್ಯರು ಪದನಿಮಿತ್ತ ಸದಸ್ಯರಾಗಿರುತ್ತಾರೆ.

ಚುನಾಯಿತ ಸದಸ್ಯರು:

1.	ಶ್ರೀಯುತರಾದ	ಕೆ. ಬಸವಯ್ಯ	ಅಧ್ಯಕ್ಷರು
2.	,,	ಹೆಚ್.ಎಸ್. ಶಿವಣ್ಣ	ನಿರ್ದೇಶಕರು
3.	,,	ಮಾರಾಯ್ಯ	,,
4.	,,	ಮಾರಯ್ಯ	,,
5.	,,	ಈರಯ್ಯ ಮೊತ್ತ	,,
6.	,,	ಈರಯ್ಯ ಕೆ.ಆರ್. ಪುರ	,,
7.	ಶ್ರೀಮತಿ ನಾಗಿ		,,

ಪದನಿಮಿತ್ತ ಸದಸ್ಯರು:

1. ಯೋಜನಾ ಸಮನ್ವಯಾಧಿಕಾರಿ, ಐಟಿಡಿಪಿ ಮೈಸೂರು, ವ್ಯವಸ್ಥಾಪಕ ನಿರ್ದೇಶಕರು.
2. ತಹಶೀಲ್ದಾರ್, ಹೆಗ್ಗಡದೇವನಕೋಟೆ.
3. ಕ್ಷೇತ್ರಾಭಿವೃದ್ಧಿ ಅಧಿಕಾರಿ, ಹೆಗ್ಗಡದೇವನಕೋಟೆ.
4. ವಲಯ ಅರಣ್ಯ ಅಧಿಕಾರಿ, ಹೆಗ್ಗಡದೇವನಕೋಟೆ.
5. ಕಾರ್ಯನಿರ್ವಹಣೆ ವ್ಯವಸ್ಥಾಪಕರು, ಕಾವೇರಿ ಗ್ರಾಮೀಣ ಬ್ಯಾಂಕ್, ಅಂತರಸಂತೆ.
6. ಉಪನಿರ್ದೇಶಕರು, ಸಮಾಜ ಕಲ್ಯಾಣ ಬೆಂಗಳೂರು.

ಆ) ಇಲ್ಲ. ಆದರೆ 1984-85ರ ಆಡಿಟ್ ವರದಿಯ ಪ್ರಕಾರ ಹಣ ದುರುಪಯೋಗವಾಗಿರುವುದು ತಿಳಿದು ಬಂದಿದೆ.

ಇ) ಮಾಜಿ ಕಾರ್ಯದರ್ಶಿ ಮತ್ತು ಮಾಜಿ ವ್ಯವಸ್ಥಾಪಕ ನಿರ್ದೇಶಕರ ಮೇಲೆ ಸಿ.ಸಿ.ಎ. ರೀತ್ಯ ಕ್ರಮ ತೆಗೆದುಕೊಳ್ಳಲು ಕ್ರಮ ಜರುಗಿಸಲಾಗುತ್ತಿದೆ.

ಬೆಂಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೋತ್ತರಗಳನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೋತ್ತರಗಳನ್ನು ಸಭೆಯ ಮುಂದೆ ಇಡಲಾಯಿತು.

ದಕ್ಷಿಣ ಕನ್ನಡದ ಭೂ ನ್ಯಾಯಮಂಡಳಿಗಳ ತೀರ್ಮಾನಗಳು

೧೩೯೭ (೧೩೫೬) ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ೧೯೮೫-೮೬, ೧೯೮೬-೮೭ನೇ ಸಾಲುಗಳಲ್ಲಿ ದಕ್ಷಿಣ ಕನ್ನಡ ಭೂ ನ್ಯಾಯ ಮಂಡಳಿಗಳು ಇತ್ಯರ್ಥಪಡಿಸಿದ ಹಾಗೂ ಇತ್ಯರ್ಥ ವಾಗದಿರುವ ಪ್ರಕರಣಗಳ ಸಂಖ್ಯೆ ಎಷ್ಟು ? (ತಾಲ್ಲೂಕುವಾರು ವಿವರ ಒದಗಿಸುವುದು)